ದಿಃ04.01.2023 O S No.106/2015 PW-1

ದಿಃ04.01.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಬಿ ಕೆ ವಕೀಲರಿಂದ

ವಾದಿಯನ್ನು ಸಾಕ್ಷ್ಯ ನುಡಿಯಲು ಕೇಳಿದ್ದು, ಅವರು ಬರಲು ಆಗುದ ಕಾರಣ ನಿನ್ನನ್ನು ಸಾಕ್ಷ್ಯ ನುಡಿಯಲು ಕಳುಹಿಸಿದ್ದೇನೆ ಎಂದು ಹೇಳಿದರು ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ವಾದಿಯ ವಿಧಾಭ್ಯಾಸದ ಧೃಢೀಕರಣ ಪತ್ರವಾಗಿದ್ದು ಸದರಿ ದಾಖಲಾತಿಯನ್ನು ನಿಡಿ-4 ಎಂದು ಗುರುತಿಸಲಾಯಿತು. ನಿಡಿ-4 ರಲ್ಲಿ ವಾದಿಯ ತಂದೆಯ ಹೆಸರು ನಾಗಣ್ಣ ಎಂದು ಇದೆ ಎಂದರೆ ಸಾಕ್ಷಿ ಹೌದು ಮುಂದುವರೆದು ಅವರು ಸ್ವಂತ ತಂದೆ ತಾಯಿ ಅಲ್ಲ ಅವರ ತಂದೆ ತಾಯಿಯ ಹೆಸರು ಜಯಲಕ್ಷಮ್ಮ, ಪುಟ್ಟಸ್ವಾಮಿ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ವಾದಿಯ ತಾಯಿ ಜಯಲಕ್ಷಮ್ಮ ನವರು ಸ್ವಂತವಾಗಿ ಖರೀದಿ ಮಾಡಿರುವ ಸ್ವತ್ತು. ಜಯಲಕ್ಷಮ್ಮನವರು ದಿ.21.06.2006 ರಲ್ಲಿ ಖರೀದಿ ಮಾಡಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ಯಾರ ಹೆಸರಿಗೆ ದಾನಪತ್ರವಾಗಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಸದರಿ ದಾನಪತ್ರವನ್ನು ತೋರಿಸಿ ಅದು ದಾನಪತ್ರವೆಂದು ನುಡಿದಿರುತ್ತಾರೆ ಸದರಿ ದಾನಪತ್ರವನ್ನು ನಿಡಿ-6 ಎಂದು ಗುರುತಿಸಲಾಯಿತು. ದಾವಾ ಷೆಡ್ಯೂಲ್ ಸ್ವತ್ತು ವಿಲ್ ಆಗಿರುವ ಬಗ್ಗೆ ನನ್ನ ಮ್ಜ್ಯು ವಿಚಾರಣೆಯಲ್ಲಿ ಹೇಳಿದ್ದು ನ್ಯಾಯಾಲಯಕ್ಕೆ ಸದರಿ ವಿಲ್ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ಹೇಳುವಂತೆ ಯಾವುದೇ ವಿಲ್ ಆಗಿಲ್ಲ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿದ್ದು ಅದು ಜಯಲಕ್ಷಮ್ಮನವರ ಉತ್ತರ ಕ್ರಿಯಾದಿ ಭೂಶಾಂತಿ ಅಹ್ವಾನ ಪತ್ರಿಕೆಯಾಗಿದ್ದು ಸದರಿ ಪತ್ರಿಕೆಯನ್ನು ನಿಡಿ-6 ಎಂದು ಗುರುತಿಸಲಾಗಿದ್ದು, ನಿಡಿ-6 ರಲ್ಲಿ ದಿ.13.04.2010 ರಂದು ಜಯಲಕ್ಷಮ್ಮನವರು ಮರಣ ಹೊಂದಿದ್ದಾರೆ ಎಂದು ನಮೂದು ಆಗಿದೆ ಎಂದು ನುಡಿಯುತ್ತಾರೆ. ಜಯಲಕ್ಷಮ್ಮನವರ ಪತಿ ಯಾವಾಗ ಮರಣ ಹೊಂದಿದರು ಎಂದರೆ ದಿ.28.12.2007 ಎಂದು ನುಡಿಯುತ್ತಾರೆ. ಜಯಲಕ್ಷಮ್ಮನವರ ಪತಿಯವರ ಉತ್ತರ ಕ್ರಿಯಾಧಿ

ಕಾರ್ಯವನ್ನು ಯಾರು ಮಾಡಿದರು ಎಂದರೆ ವಾದಿಯೇ ನಿರ್ವಹಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿದ್ದು ಅದು ಜಯಲಕ್ಷಮ್ಮನವರ ಗಂಡನ ಉತ್ತರ ಕ್ರಿಯಾದಿ ಭೂಶಾಂತಿ ಅಹ್ವಾನ ಪತ್ರಿಕೆಯಾಗಿದ್ದು ಸದರಿ ಪತ್ರಿಕೆಯನ್ನು ನಿಡಿ-7 ಎಂದು ಗುರುತಿಸಲಾಗಿದ್ದು. ಪ್ರತಿವಾದಿಯ ತಾಯಿ ಜಯಲಕ್ಷಮ್ಮನವರ ಮರಣಾನಂತರ ಪ್ರತಿವಾದಿಯ ಹೆಸರಗೆ ದಾವಾ ಷಡ್ಯೂಲ್ ಸ್ವತ್ತು ಖಾತೆಯಾಗಿದ್ದು, ದಿ. 24.11.2014 ರಲ್ಲಿ ಪ್ರತಿವಾದಿಯ ಪತಿಯ ಹೆಸರಿಗೆ ಪ್ರತಿವಾದಿ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿ.21.06.2006 ರಲ್ಲಿ ಜಯಲಕ್ಷಮ್ಮನವರು ದಾವಾ ಷಡ್ಯೂಲ್ ಸ್ವತ್ತು ಖರೀದಿ ಮಾಡಿರುವ ಅಸಲು ಕ್ರಯಪತ್ರ ನ್ಯಾಯಾಲಯಕ್ಕೆ ನೀವು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಸದರಿ ದಾಖಲಾತಿಯು ಪ್ರತಿವಾದಿಯ ಬಳಿಯೇ ಇದೆ ಎಂದು ನುಡಿಯುತ್ತಾರೆ. ವಾದಿ ನಾಗಣ್ಣ ಮತ್ತು ಸರಸ್ವತಮ್ಮ ನವರ ಮಗ, ಜಯಲಕ್ಷಮ್ಮ ಮತ್ತು ಪುಟ್ಟಸ್ವಾಮಿಯವರ ಮಗ ಅಲ್ಲ ಎಂದರೆ ಸರಿಯಲ್ಲ. ವಾದಿ ಮದ್ದೂರಿನಲ್ಲಿ ಮತದಾರರ ಗುರುತಿನ ಚೀಟಿಯನ್ನು ಹೊಂದಿದ್ದರು ಎಂದರೆ ಸುಳ್ಳು. ಸದರಿ ಮತದಾರರ ಗುರುತಿನ ಚೀಟಿಯ ಆಧಾರದ ಮೇಲೆ ನಿಡಿ-1 ರಿಂದ ನಿಡಿ-3 ನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ದಾವೆಗೆ ಸಂಬಂಧಿಸಿದ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಇದೇ ನ್ಯಾಯಾಲಯದ ಮುಂದೆ ಕ್ರಿಮಿನಲ್ ಮೊಕ್ಕದ್ದಮೆಯಲ್ಲಿ ಸಾಕ್ಷ್ಯ ನುಡಿದಿದ್ದು ಪ್ರಸ್ತುತ ದಾವೆಯಲ್ಲಿ ಸಾಕ್ಷ್ಯ ನುಡಿದರೆ ನಿಜ ಸಂಗತಿ ಹೊರ ಬರುತ್ತದೆ ಎಂದು ಸುಳ್ಳು ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಅಧಿಕಾರ ಪತ್ರ ಪಡೆದುಕೊಂಡ ನಂತರ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದಿದ್ದಾರೆ ಎಂದರೆ ಸಾಕ್ಷಿ ಆಗಲು ಸಹ ಅವರು ಒತ್ತಾಯದ ಮೇಲೆ ಅರೋಗ್ಯ ಸರಿ ಇಲ್ಲದೇ ಇದ್ದರು ಸಹ ಬಂದು ಸಾಕ್ಷ್ಯ ನುಡಿದಿದ್ದಾರೆ ಎಂದರೇ ಸುಳ್ಳು. ದಾವಾ ಷಡ್ಯೂಲ್ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂಬುದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾದೀನದಲ್ಲಿ ಇಲ್ಲದೇ ಇದ್ದರು ಸಹ ಸ್ವಾದೀನದಲ್ಲಿ ಇದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ

ಷಡ್ಯೂಲ್ ಸ್ವತ್ತು ಆರ್ ಸಿ ಸಿ ಮನೆಯಾಗಿದ್ದು ಸದರಿ ಸ್ವತ್ತಿನಲ್ಲಿ ಪ್ರತಿವಾದಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಇಬ್ಬರೂ ವಾಸವಾಗಿದ್ದೆವು ಎಂದು ನುಡಿಯುತ್ತಾರೆ. ನೀವು ದಾವಾ ಷಡ್ಯೂಲ್ ಸ್ವತ್ತಿನಲ್ಲಿ ಸ್ವಾದೀನದಲ್ಲಿ ಇಲ್ಲದೇ ಇದ್ದರೂ ಸಹ ಸ್ವಾದೀನದಲ್ಲಿ ಇದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೀರಾ ಎಂದರೆ ಸಾಕ್ಷಿ ಇಲ್ಲ ಸ್ವಾದೀನದಲ್ಲಿ ಇದ್ದೇವೆ ಎಂದು ನುಡಿಯುುತ್ತಾರೆ. ನಾವು ಹಾಲಿ ಮದ್ದೂರಿನಲ್ಲಿ ವಾಸವಾಗಿದ್ದೇವೆ ಎಂದರೆ ಸಾಕ್ಷಿ ನಾವು ತಟ್ಟೆಕೆರೆ ವಿನಾಯಕನಗರದಲ್ಲಿ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಷಡ್ಯೂಲ್ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರು ಸಹ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಓ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.